## ಕಾರ್ಪೊರೇಟ್ ಕಲಹದ ಕೊರೊನಾ

ವೀಕ್ಷಕರ ಗಮನ ಸೆಳೆದಿರುವ 'ಕನ್ನಡತಿ'ಗೆ ಇತ್ತೀಚೆಗೆ ಕಾರ್ಪೊರೇಟ್ ಕುಟುಂಬದ ಅಂತರಿಕ ಕಲಹದ ಕೊರೊನಾ ತಗುಲಿದೆ. ಕನ್ನಡ ನಾಡುನುಡಿ, ಅಭಿಮಾನ ಮತ್ತು ಅಳಿದು ಹೋಗುತ್ತಿರುವ ಕನ್ನಡ ಭಾಷೆಯನ್ನು ಉಳಿಸುವ ಸುತ್ತ ಏನಾದರೂ ಇರಬಹುದೆಂದು ನಿರೀಕ್ಷಿಸಿದವರಿಗೆ ಧಾರಾವಾಹಿಯ ಕೊನೆಯಲ್ಲಿ ಕನ್ನಡಾಭಿಮಾನಿ ಪಾತ್ರಧಾರಿಯೊಬ್ಬಳಿಂದ ಪ್ರತಿದಿನ ಒಂದು ಕನ್ನಡ ಶಬ್ದದ ಬಗೆಗೆ ಒಂದು ನಿಮಿಷದ ಸಂಕ್ಷಿಪ್ತ ವಿವರಣೆ ಮಾತ್ರ ಸಿಗುತ್ತಿದೆ. ಧಾರಾವಾಹಿಗಳಲ್ಲಿ ಸಾಮಾನ್ಯವಾಗಿರುವ ಮನೆ ಮುರಿಯುವ, ಮನ ಒಡೆಯುವ ಮತ್ತು ನಗರ ಜೀವನವನ್ನು ವೈಭವೀಕರಿಸುವ ಧಾರಾವಾಹಿಗಳ ಸಿದ್ಧ ಸೂತ್ರಕ್ಕೆ ಇದೂ ಬಲಿಯಾಗುತ್ತಿರುವುದು ಆಘಾತಕಾರಿಯಾಗಿದೆ. 'ವರುದಿನಿ' ಪಾತ್ರಕ್ಕೆ ತುಸು ಹೆಚ್ಚು ಬೆಡಗು, ಬಿನ್ನಾಣ, ವೈಯಾರ, ಸೊಕ್ಕು ಮತ್ತು ಅಹಂ ತುರುಕಿದಂತೆ ಕಂಡರೆ, ಸೊಸೆಯೊಬ್ಬಳು ಅತ್ತೆಯ ಕಂಪನಿಯ ಆಧಿಕಾರವನ್ನು ಇಷ್ಟು ಬೇಗ ಸೆಳೆದುಕೊಳ್ಳುವುದು ಅವಸರದಂತೆ ಕಾಣುತ್ತದೆ.

—ರಮಾನಂದ ಶರ್ಮಾ

## ಮಹಾಭಾರತದಿಂದ ಮೌಲ್ಯ ಪ್ರಸರಣ

ಶಾಲೆಗೆ ರಜೆ ಇದ್ದ ಕಾರಣ ಸ್ಟಾರ್ ಸುವರ್ಣದ 'ಮಹಾಭಾರತ' ಮತ್ತು 'ರಾಧಾಕೃಷ್ಣ'ದಿಂದ ಹಲವು ಮೌಲ್ಯಯುತ ವಿಷಯಗಳನ್ನು ತಿಳಿದುಕೊಂಡೆ. ಮಹಾಭಾರತದ ಪಾತ್ರಧಾರಿಗಳ ಹೆಸರು ಅವರ ಜೀವನದ ನೀತಿ ಗೊತ್ತಾಯಿತು.

'ರಾಧಾಕೃಷ್ಣ'ದಲ್ಲಿ ಕೃಷ್ಣನ ತುಂಟತನ ಹಾಗೂ ರಾಧಾಕೃಷ್ಣರ ಪ್ರೇಮ ಪ್ರಕರಣ ರಮ್ಯವಾಗಿತ್ತು. 'ಮಹಾಭಾರತ'ದ ಧರ್ಮದಿಂದ ನಡೆಯಬೇಕು ಎನ್ನುವ ಸಾರ್ವಕಾಲಿಕ ಮೌಲ್ಯ ಬಿಂಬಿತವಾಗಿದೆ. ಏಕಲವ್ಯನ ಕಥೆಯಿಂದ ಗುರುಗಳಿಗೆ ಗೌರವ ಕೊಡುವುದನ್ನು ಕಲಿತೆ.

ಮಾತಿಗೆ ತಕ್ಕಂತೆ ನಡೆಯಬೇಕು; ಪ್ರೀತಿಗೆ ಬೆಲೆ ಕೊಡಬೇಕು; ಹಿರಿಯರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು; ಯಾರಿಗೂ ನಡೆಯಲ್ಲಿ ನುಡಿಯಲ್ಲಿ ಅವಮಾನ ಮಾಡಬಾರದು; ಜೀವನದಲ್ಲಿ ಗುರಿ ಇಟ್ಟುಕೊಂಡು ಆ ಗುರಿಯನ್ನು ಸಾಧಿಸುವ ತನಕ ಪ್ರಯತ್ನ ಮಾಡಬೇಕು – ಹೀಗೆ ಹಲವು ಮೌಲ್ಯಗಳು ತಿಳಿದವರು. ದಿನದಿಂದ ದಿನಕ್ಕೆ ಕುತೂಹಲದಿಂದ ಕೂಡಿದ ಮಹಾಭಾರತವನ್ನು ಎಲ್ಲರೂ ತಪ್ಪದೇ ವೀಕ್ಷಿಸಿ. ವಿದ್ಯಾರ್ಥಿ ಜೀವನದಲ್ಲಿ ಇಂತಹ ಪುರಾಣ ಕಥೆಗಳು ನಮ್ಮಲ್ಲಿ ಧೈರ್ಯ ಸಾಹಸವನ್ನೂ ನೀಡುತ್ತದೆ.

—ಇಂಚರ, 7ನೇತರಗತಿ ಕೆ.ಆರ್. ಪುರಂ

ವಾರದ ಪತ್ರ

## ವಿದ್ಯಾರ್ಜನೆಗೆ ಚಂದ ವೇದಿಕೆ

ದೂರದರ್ಶನದ 'ಸೇತುಬಂಧ' ಕಾರ್ಯಕ್ರಮ ವಿದ್ಯಾರ್ಜನೆಗೆ ಅನುಕೂಲವಾಗಿದೆ. ಚಂದನವಾಹಿನಿಯಲ್ಲಿ ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಶಿಕ್ಷಣ ತಜ್ಞರು ನೀಡುವ ಸಲಹೆ ಉತ್ತಮವಾಗಿದೆ. ಈ ಯೋಜನೆಯಿಂದ ಎಲ್ಲಾ ವರ್ಗದವರು ಖರ್ಚಿಲ್ಲದೆ ಕಣ್ಣಿಗೆ ಆಯಾಸವಿಲ್ಲದೆ ದೊಡ್ಡ ಪರದೆಯಲ್ಲಿ ಶಿಕ್ಷಣವನ್ನು ಪಡೆಯಬಹುದು. ಅನುಭವಿ ಶಿಕ್ಷಕರು ಮಕ್ಕಳಿಗೆ ಮನಮುಟ್ಟುವ ಹಾಗೆ ಹೇಳಿ ಕೊಡುತ್ತಿದ್ದಾರೆ. ಮಕ್ಕಳಿಗೆ ಓದಿನ ಕಡೆ ಆಸಕ್ತಿ ಹುಟ್ಟಿಸುತ್ತಿದ್ದಾರೆ. ಈ ಸಮಯದಲ್ಲಿ ವಿದ್ಯುತ್ ವ್ಯತ್ಯಯ ಆಗದ ಹಾಗೆ ನೋಡಿಕೊಳ್ಳಬೇಕಾಗಿದೆ. ವಿದ್ಯಾವಂತ ಪೋಷಕರು ಮಕ್ಕಳ ಜೊತೆ ಈ ಕಾರ್ಯಕ್ರಮವನ್ನು ವೀಕ್ಷಿಸಿದರೆ ಮಕ್ಕಳಿಗೆ ಅರ್ಥವಾಗದ ವಿಷಯವನ್ನು ತಿಳಿಹೇಳಬಹುದು. ಪೋಷಕರಿಗೂ ಜ್ಞಾನ ಹೆಚ್ಚಾಗುತ್ತದೆ. ಮಕ್ಕಳ ಮನಸ್ಸು ಅರ್ಥ ಮಾಡಿಕೊಳ್ಳಲು ಅವಕಾಶ ಸಿಕ್ಕಂತಾಗುತ್ತದೆ. ಮನೆಯಲ್ಲಿ ಕುಳಿತು ಪಾಠ ಕೇಳುವುದರಿಂದ ಕೊರೊನಾ ಆತಂಕವೂ ಇರುವುದಿಲ್ಲ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು



## ಅದ್ಭುತ ವಿಕಟ ನಗು

ಸ್ಟಾರ್ ಸುವರ್ಣದ 'ಮಹಾಭಾರತ' ಅತಿ ಉತ್ತಮವಾಗಿ ಮೂಡಿಬರುತ್ತಿದೆ. ಅದರಲ್ಲಿ ಶಕುನಿ ಪಾತ್ರಧಾರಿಯ ನಟನೆ ನೋಡಿದರೆ ನಿಜವಾಗಿಯೂ ಮಹಾಭಾರತದ ಶಕುನಿ ಹೀಗೆ ಇದ್ದನೇನೋ ಎಂದೆನಿಸುತ್ತದೆ. ಕಾಲು ಊನು ಮಾಡಿಕೊಂಡು ನಡೆಯುವ ನಡಿಗೆ, ಒಂದೇ ಕಣ್ಣು ಮುಚ್ಚಿ ತನ್ನ ಜಯದ ವಿಕಟ ನಗೆಯನ್ನು ಬೀರುತ್ತಾ, ದುರ್ಯೋಧನನನ್ನು 'ಮಗುವೇ' ಎಂದು ಸಂಬೋಧಿಸುತ್ತಾ, ಅವನನ್ನೇ ತನ್ನ ಆಟದ ದಾಳವನ್ನಾಗಿಸಿಕೊಂಡು ಕೌರವರ ಮೇಲೆ ಸೇಡು ತೀರಿಸಿಕೊಳ್ಳುವ ಬಗೆಯ ಅಭಿನಯ... ಆಹಾ! ಅತ್ಯದ್ಭುತವಾಗಿ ಮೂಡಿಬಂದಿದೆ.

—ಸಜನಿ ಭಟ್ಟ, ಶಿರಸಿ

## ಕುಯುಕ್ತಿಗೆ ಕೊನೆ ಇಲ್ಲವೆ?

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಪಾರು'ವಿನಲ್ಲಿ ಧಾಮಿನಿಯ ಪಾತ್ರ ಬಹಳ ಕಿರಿ ರಿ ಉಂಟುಮಾಡುತ್ತಿದೆ. ಹಾಸ್ಯದ ಹೆಸರಿನಲ್ಲಿ ಅಪಹಾಸ್ಯ ಒಂದು ಅಥವಾ ಎರಡು ಸಲ ಒಪ್ಪಬಹುದು. ದಿನನಿತ್ಯವೂ ಹೇಗೆ ಸಹಿಸಿಕೊಳ್ಳುವುದು? ಇದರಿಂದ ಧಾರಾವಾಹಿಗೆ ಖಂಡಿತ ಕುತ್ತು ಎದುರಾಗುತ್ತದೆ. ಅವಳ ಹಾವ ಭಾವ ಮಾತಿನ ವೈಖರಿ ಟೀವಿ ಪರದೆಯ ಮೇಲೆ ನೋಡಲು ಅಸಾಧ್ಯ. ಹೆಸರಿಗೆ ದೊಡ್ಡ ಕಂಪನಿಯ ಸದಸ್ಯರ ಮನೆ. ಕೆಲಸಕ್ಕೆ ಆಳು ಕಾಳುಗಳು. ಇವರ ಮಧ್ಯ ಈ ಬೇಜವಾಬ್ದಾರಿ ಹೆಂಗಸು. ಅಕ್ಕ ನೋಡಿದರೆ ಗತ್ತು ಗಮ್ಮತ್ತು. ಅವಳ ತಂಗಿಗೆ ದೊಂಬರಾಟದ ಹೀನಬುದ್ಧಿ ಹೇಗೆ ಸಾಧ್ಯ? ದಯವಿಟ್ಟು ಈ ಪಾತ್ರ ನಿಲ್ಲಿಸಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮರುಪ್ರಸಾರದ ದೋಷ

ಈಚೆಗೆ ಹಲವು ಕಾರ್ಯಕ್ರಮಗಳು ಮರುಪ್ರಸಾರವಾಗುತ್ತಿವೆ. ಅದಕ್ಕೆ ಚಂದನದ 'ಥಟ್ ಅಂತ ಹೇಳಿ', 'ಮಧುರ ಮಧುರವೀ ಮಂಜುಳ ಗಾನ' ಕೂಡ ಹೊರತಾಗಿಲ್ಲ. ಕೇವಲ 2–3 ತಿಂಗಳುಗಳ ಹಿಂದೆಯಷ್ಟೇ ಪ್ರಸಾರವಾಗಿದ್ದ ಕಾರ್ಯಕ್ರಮಗಳೇ ಪುನರಾವರ್ತನೆಗೊಳ್ಳುತ್ತಿವೆ. ಅದರ ಬದಲು ಇದೇ ಕಾರ್ಯಕ್ರಮದ ಕೆಲವರ್ಷಗಳ ಹಿಂದಿನ ಸಂಚಿಕೆಗಳನ್ನು ಪ್ರಸಾರ ಮಾಡುವುದು ಸೂಕ್ತ.

'ಮಧುರದಲ್ಲಿ...' ಕೆಲವು ವಿಶೇಷ ಸಂಚಿಕೆಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ 'ಹಾಡು ಹಳೆಯದಾದರೇನು ಭಾವ ನವನವೀನ' ಅಂತಹ ಕಾರ್ಯಕ್ರಮ ಬೇಸರ ಅನ್ನಿಸುವುದಿಲ್ಲ. ಅಂತೆಯೇ 'ಥಟ್‌ನಲ್ಲಿ...' 'ಕ್ರೀಡಾ ವಿಶೇಷ', 'ಸಿನಿಮಾ ವಿಶೇಷ'ಗಳೂ ಇವೆ. ಅವುಗಳನ್ನಾದರೂ ಮರುಪ್ರಸಾರ ಮಾಡಿದರೆ ಒಳಿತು.

—ಶ್ರೀಧರ್, ಬೆಂಗಳೂರು

## ಹಿರಿಯರಿಗೆ ಗೌರವ ಸಲ್ಲಿಸುವಂತಾಗಲಿ!

ಚಂದನದಲ್ಲಿ ಅಪ್ಪಟ ಕನ್ನಡ ಕಥೆಯ ಧಾರಾವಾಹಿ ಬಿತ್ತರಿಸಲಾಗುತ್ತದೆ. ತರಾಸು ಕಾದಂಬರಿ ಆಧಾರಿತ 'ಮುಂಜಾನೆ' ಕೌಟುಂಬಿಕ ಧಾರಾವಾಹಿಯಾಗಿದ್ದರೆ, 'ಅಂತರಾಳ' ದೇಶಭಕ್ತಿಯನ್ನು ಬಿಂಬಿಸುತ್ತದೆ.

ಬೇರೆ ವಾಹಿನಿಗಳ ಕಥೆಗಳಂತೆ ಮಹಿಳೆಯರನ್ನು ಋಣಾತ್ಮಕ ಪಾತ್ರಗಳಲ್ಲಿ ವೈಭವೀಕರಿಸುವಂತಹ ದೃಶ್ಯಗಳಿಲ್ಲಿ ಹೆಣೆದಿಲ್ಲ. ನಾಟಕೀಯತೆಗಳಿಲ್ಲ, ಅಬ್ಬರದ ಸಂಗೀತಗಳ ಕರ್ಕಶವಿಲ್ಲ. ಸರಳತೆಯ ಪ್ರತೀಕದಂತಿವೆ. ಅಚ್ಚಗನ್ನಡದ ಮಣ್ಣಿನ ವಾಸನೆಯೊಂದಿಗೆ ಸಾರ್ಥಕತೆ ಮೂಡಿಸುತ್ತವೆ.

ಕನ್ನಡದ ಶ್ರೇಷ್ಠ ಸಾಹಿತಿಗಳ ಜನಪ್ರಿಯ ಕಾದಂಬರಿಗಳನ್ನು ಬಳಸಿ ಧಾರಾವಾಹಿಗಳನ್ನು ಮಾಡುವ ಬಗ್ಗೆ ಇತರ ವಾಹಿನಿಗಳೂ ಚಿತ್ತ ಹರಿಸಬೇಕು. ಈ ಹಿರಿಯ ಸಾಹಿತಿಗಳಿಗೆ ಗೌರವವನ್ನೂ ಸಲ್ಲಿಸುವಂತಾಗಬೇಕು.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ